ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗರಸ್ತೆ, ಬೆಂಗಳೂರು-1

ಸಂಖ್ಯೆ:ಸಿ7(8)/ಆರ್.ಟಿ.ಇ/ಶು.ಮ/ತಂತ್ರಾಂಶ/ಬಿಡು/2020-21 ದಿನಾಂಕ: 04.10.2021

::ಸುತ್ತೋಲೆ::

ವಿಷಯ : 2020-21ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಗೆ ಅಪೀಲ್ ಹೋಗ ಬಯಸುವ ಶಾಲೆಗಳಿಗೆ ಅಪೀಲು ತಂತ್ರಾಂಶ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ : ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 02.01.2021

***********

ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ 2020-21ನೇ ಸಾಲಿನ ಶುಲ್ಕ ಮರುಪಾವತಿಯ ಎರಡೂ ಕಂತುಗಳ ಮೊತ್ತವನ್ನು ಪಡೆದು, ಶಾಲಾ ಹಂತದಲ್ಲಿ ಕ್ಲೈಂ ಮಾಡಿರುವ ಮೊತ್ತವು ಕೆಲವು ಕಾರಣಗಳಿಂದ ಅಂದರೆ ಆರ್.ಟಿ.ಇ. ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವ್ಯತ್ಯಯ, ಶಾಲಾ ಖರ್ಚು ವೆಚ್ಚಗಳು ಅಥವಾ ಇವರೆಡೂ ಸೇರಿ ವ್ಯತ್ಯಯವಾಗಿರುವಂತಹ ಬಾದಿತ ಶಾಲೆಗಳಿಗೆ ಅಪೀಲ್ ಸಲ್ಲಿಸಿ ಅರ್ಹ ಮೊತ್ತ ಪಡೆಯಲು ಅಪೀಲು ತಂತ್ರಾಂಶವನ್ನು ದಿನಾಂಕ : 04-10-2021 ರಿಂದ 25-10-2021ರ ವರೆಗೆ ಬಿಡುಗಡೆ ಮಾಡಿದೆ. ಅಪೀಲು ತಂತ್ರಾಂಶದಲ್ಲಿ ಅನುಸರಿಸಬೇಕಾದ ಕ್ರಮಗಳು ಕೆಳಕಂಡಂತಿರುತ್ತದೆ.

1. ಅಪೀಲು ಹೋಗ ಬಯಸುವ ಶಾಲೆಗಳು 2020-21ರ ಎರಡೂ ಕಂತಿನ ಶುಲ್ಕ ಮರುಪಾವತಿ ಪಡೆದಿರಬೇಕು.
2. ಬಿಟ್ಟು ಹೋಗಿರುವ ಆರ್.ಟಿ.ಇ. ಮಕ್ಕಳ ಪಟ್ಟಿಯನ್ನು ಎಸ್.ಎ.ಟಿ.ಎಸ್. ತಂತ್ರಾಂಶದಿಂದ ಸೆಳೆದು ಶುಲ್ಕ ಮರುಪಾವತಿ ತಂತ್ರಾಂಶದ ಶಾಲಾ ಲಾಗಿನ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಇದನ್ನು ಪರಿಶೀಲಿಸಿ ಸೇರ್ಪಡೆ ಮಾಡುವುದು.
3. ಶಾಲಾ ಹಂತದ ಅಪೀಲು ಲಾಗಿನ್‌ನಲ್ಲಿ ಸೇರಿಸಲಾಗಿರುವ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಉಪನಿರ್ದೇಶಕರ ಲಾಗಿನ್‌ಗಳಲ್ಲಿ ಚೆಕ್ ಬಾಕ್ಸ್ ನೀಡಲಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಸದರಿ ವಿದ್ಯಾರ್ಥಿಗಳ ವಿವರಗಳನ್ನು ಪರಿಶೀಲಿಸಿ, ಖಾತ್ರಿ ಪಡಿಸಿಕೊಂಡ ನಂತರವೇ ಅನುಮೋದನೆ ನೀಡುವುದು.
4. ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಅಪೀಲ್ ಅರ್ಜಿಯನ್ನು ತಿರಸ್ಕರಿಸಿದಲ್ಲಿ (Disagree) ಕಾರಣವನ್ನು ಕಡ್ಡಾಯವಾಗಿ ದಾಖಲಿಸುವುದು.
5. ಅಪೀಲು ತಂತ್ರಾಂಶವು ಏಕಮುಖ ಹರಿವಿಗೆ ಒಳಪಟ್ಟಿದ್ದು, ಇದು ಮಾನ್ಯ ಆಯುಕ್ತರ ಹಂತದಲ್ಲಿ ತಿರಸ್ಕೃತವಾದಲ್ಲಿ ಸದರಿ ಶಾಲೆಯ ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಗಣಿಸಲಾಗುವುದಿಲ್ಲ.
6. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು ತಮ್ಮ ಲಾಗಿನ್‌ಗಳಲ್ಲಿ ಬಾಕಿ ಉಳಿಸಿಕೊಂಡಿರುವ 2020-21 ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಯ ಪ್ರಥಮ ಮತ್ತು ದ್ವಿತೀಯ ಕಂತಿನ ಬೇಡಿಕೆಗಳನ್ನು ತುರ್ತಾಗಿ ಇತ್ಯರ್ಥಪಡಿಸಿ, ಅಪೀಲು ಹೋಗ ಬಯಸುವ ಶಾಲೆಗಳಿಗೆ ಅವಕಾಶ ನೀಡುವುದು.
7. 2020-21ರ ಶುಲ್ಕ ಮರುಪಾವತಿಗೆ ಅಪೀಲನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅಂತಿಮ ದಿನಾಂಕ : 25-10-2021 ಆಗಿದ್ದು, ತದನಂತರ ಅಪೀಲ್ ಸಲ್ಲಿಸಲು ಯಾವುದೇ ಅವಕಾಶವಿರುವುದಿಲ್ಲ.

2021-22ರ ಆರ್.ಟಿ.ಇ. ಶುಲ್ಕ ಮರುಪಾವತಿ ಅಪೀಲಿನಲ್ಲಿ ಮೇಲಿನ ಎಲ್ಲಾ ಕ್ರಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಲು ಸೂಚಿಸಿದೆ.

(ಮಾನ್ಯ ಆಯುಕ್ತರ ಆದೇಶದಂತೆ)

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಪ್ರತಿಗಳು :

1. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ, ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್. ವಿಭಾಗ, ಸಮಗ್ರ ಶಿಕ್ಷಣ ಕರ್ನಾಟಕ, ಇವರಿಗೆ ಸೂಕ್ತ ಕ್ರಮಕ್ಕಾಗಿ
7. ಸಂಬಂಧಿಸಿದ ಖಾಸಗಿ ಅನುದಾನರಹಿತ ಶಾಲೆಗಳ ಮುಖ್ಯಸ್ಥರು/ಕಾರ್ಯದರ್ಶಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ
8. ಕಛೇರಿ ಪ್ರತಿ